ಗುಲಾಬೀನ ಬಿಟ್ಟಿರಲಾರೆ ಎಂಬ ತೀರ್ಮಾನಕ್ಕೆ ಬಂದ. ಕೆಂಚನೊಟ್ಟಿಗೆ ಒಂದು ವಾರ ಪೂರ್ತಿ ಸಮಾಲೋಚಿಸಿದ.

ಗ್ಯಾನಿ ಮತ್ತು ಕೆಂಚರಿಬ್ಬರೂ ಬೆಳಿಗ್ಗೆಯೇ ಕುಂಬಳೂರು ಮುಟ್ಟಿ ಗುಲಾಬಿಯನ್ನು ಹಾಗೂ ಅವರ ಮನೆಯವರನ್ನು ವಿಚಾರಿಸಿದರು. ಗುಲಾಬಿ ತನಗೆ ಬರಲು ಏನೂ ತೊಂದರೆಯಿಲ್ಲ. ಆದರೆ ಮನೆಯಲ್ಲಿ ಒಪ್ಪಿಸಿ ಎಂದು ಗ್ಯಾನಿಗೂ ಕೆಂಚನಿಗೂ ಹೇಳಿದಳು. ಆದರೆ ಮನೆಯವರು ಏನೇ ಆಗಲಿ ಅವಳನ್ನು ನಿನ್ನ ಹಿಂದೆ ಕಳಿಸಲಾರೆವು ಎಂದು ಹಟಹಿಡಿದರು. ಅಲ್ಲಿಂದ ಮೈಲುದೂರದಲ್ಲಿದ್ದ ಮಲೆಬೆನ್ನೂರಿಗೆ ಗ್ಯಾನಿ ಕೆಂಚರಿಬ್ಬರು ಬಂದು ಪೊಲೀಸ್ ಸ್ಟೇಷನ್ ಮೊರೆಹೊಕ್ಕರು. ಇಬ್ಬರೂ ಮುಂಚಿತವಾಗಿಯೇ ಸಿದ್ಧರಾಗಿ ಬಂದಿದ್ದರಿಂದ ಪೊಲೀಸರಿಗೆ ಸಾಕಷ್ಟು ಕೈ ಬೆಚ್ಚಗೆ ಮಾಡಿದರು. ಸೂರ್ಯ ಮುಳುಗುತ್ತಿದ್ದಂತೆ ನಾಲ್ಕು ಜನ ಪೊಲೀಸರು ಗ್ಯಾನಿ, ಕೆಂಚರನ್ನು ಹಿಂಬಾಲಿಸಿದರು.

ಗುಲಾಬಿ ಮತ್ತು ಅವಳ ಮನೆಯವರು ಪೊಲೀಸಿನವರನ್ನು ನೋಡಿ, ಅವರ ದರ್ಪ ದೌಲತ್ತುಗಳನ್ನು ನೋಡಿ ಮೆದುವಾದರು. ಗುಲಾಬಿಯನ್ನು ಗ್ಯಾನಿಯೊಂದಿಗೆ ಕಳಿಸಿಕೊಡಲು ಒಪ್ಪಿಕೊಂಡರು. ಗ್ಯಾನಿಯಂತೂ ಈ ಕ್ಷಣವೇ ಹೊರಡಬೇಕೆಂದು ತುದಿಗಾಲಲ್ಲಿ ನಿಂತುಕೊಂಡ. ನಡುವೆ ಯಾರೋ ಹೇಳಲು ಬಂದವರಿಗೆ ಪೊಲೀಸಿನವನೊಬ್ಬ 'ನೀವ್ಯಾರ‍್ರೀ? ಹೆಂಡತೀನ ಗಂಡನ ಹತ್ತಿರ ಕಳಿಸೋಕೆ ತಕರಾರು...' ಎಂದು ಗದರಿಸಿದ್ದರಿಂದ ನಡುವೆ ಮೂಗು ತೂರಿಸುವವರೆಲ್ಲಾ ತೆಪ್ಪಗಾಗಿದ್ದರು. ಗುಲಾಬಿ ಈ ರೀತಿಯೆಲ್ಲಾ ಊಹಿಸಿರದಿದ್ದರಿಂದ ಕಣ್ಣಲ್ಲಿ ಮೂಗಲ್ಲಿ ನೀರು ಸುರಿಸುತ್ತಾ ಕಿಟ್‌ನಲ್ಲಿ ತನ್ನ ಬಟ್ಟೆ ಬರೆ ಹಾಕಿ ಕೊಳ್ಳತೊಡಗಿದಳು. ಪೊಲೀಸಿನವರ ಅವಸರಕ್ಕೆ, ಗ್ಯಾನಿಯ ಆಳದ ಆತುರಕ್ಕೆ ಕೊನೆಗೊಮ್ಮೆ ಗುಲಾಬಿ ಮನೆಯಿಂದ ಹೊರಹೊರಟಳು. ಗುಲಾಬಿ ಹೊರಬರುತ್ತಿದ್ದಂತೆಯೇ ಅವಳ ಸಂಬಂಧಿಕರುಗಳೊಂದಿಗೆ ಅವಳಪ್ಪ ಅಮ್ಮರಿಬ್ಬರೂ ಅಳುವನ್ನು ಕೂಡಿಸಿದ್ದರು. ಗ್ಯಾನಿಗೆ ಮಾತ್ರ ಅತೀ ಖುಷಿಯಾಗಿತ್ತು. ಅತ್ಯಂತ ಖುಷಿಯಲ್ಲಿದ್ದ ಗ್ಯಾನಿಯನ್ನು ಅಳುತ್ತಿದ್ದ ಗುಲಾಬಿ ಹಿಂಬಾಲಿಸಿದಳು.

ರಾತ್ರಿ 9 ಗಂಟೆಯಾಗುತ್ತಾ ಬಂದಿತ್ತು. 'ಯಾವುದಕ್ಕೂ ನೀವು ಸ್ಟೇಷನ್‌ಗೆ ಬಂದು ರುಜು ಹಾಕಬೇಕು' ಎಂದು ಪೊಲೀಸರಲ್ಲಿ ಒಬ್ಬ ಹಟ ಹಿಡಿದಿದ್ದ. ಹಾಗಾಗಿ ಎಲ್ಲರೂ ಮಲೆಬೆನ್ನೂರಿಗೆ ಬಂದು ಮುಟ್ಟಿದರು. ರುಜು ಹಾಕಬೇಕೆಂದು ಹಟಹಿಡಿದ ಪೊಲೀಸಿನವನು ದಾವಣಗೆರೆಯ ಯಾವುದೋ ಸ್ಟೇಷನ್‌ಗೆ ಫೋನ್ ಮಾಡಿದ. ಯಾಕೆಂದು ಕೇಳಿದ ಸಹಪಾಠಿಗೆ 'ಸ್ವಾಮಿ ನಮ್ಮ ಹರಿಹರದ ಇನ್‌ಸ್ಪೆಕ್ಟರ್ ಮಾದೇವಣ್ಣನ ಹುಡುಗಿ ಇವಳು. ಇದು ನಂಗೊತ್ತಿತ್ತು. ಮಾದೇವಣ್ಣ ನನ್ನ ದೋಸ್ತು ಒಂದೇ ಕಡೆಯೋರು ಅದಕ್ಕೆ ಬನ್ನೀಂತ ಫೋನ್ ಮಾಡಿದೆ' ಎಂದು ಕೂಲಂಕಷವಾಗಿ ಹೇಳಿದ. ಅಲ್ಲದೆ ಅದೂ ಇದೂ ನೆಪಗಳನ್ನೊಡ್ಡಿ ಗ್ಯಾನಿ ಗುಲಾಬಿ ಕೆಂಚರನ್ನು, ಸ್ಟೇಷನ್‌ನಲ್ಲಿಯೇ ಉಳಿಸಿಕೊಳ್ಳಲು ಯಶಸ್ವಿಯಾದರು.

ರಾತ್ರಿ 11 ಗಂಟೆಗೆ ಒಂದು ಕಾರು ಬಂದು ನಿಂತಿತು. ಅದರಲ್ಲಿ ದಾವಣಗೆರೆಯಲ್ಲಿ ಇನ್‌ಸ್ಪೆಕ್ಟರ್ ಆಗಿದ್ದ ಹುಡುಗ ಮಾದೇವಣ್ಣ ಬಂದಿದ್ದ. ಅವನು ಇಳಿಯುತ್ತಿದ್ದಂತೆಯೇ ನಿದ್ದೆ ಮಂಪರು ಅಡರುತ್ತಿದ್ದ ಗುಲಾಬಿಗೆ ಹೃದಯ ಬಾಯಿಗೆ ಬಂದಿತು. ಗ್ಯಾನಿಗೆ ಇದು ಏನೆಂದು ತಿಳಿಯುವಂತಿರಲಿಲ್ಲ. ಮಾದೇವಣ್ಣ ಬಂದವನೇ ಸೀದಾ ಕೋಣೆಯೊಳಕ್ಕೆ ಹೋಗಿ, ಫೋನ್ ಮಾಡಿ ಅದುವರೆಗೂ ಕಾಯುತ್ತಾ ಇದ್ದ ಪೊಲೀಸಿನವರಿಗೆ ಏನೇನೋ ಹೇಳಿದ. ಅವನು ಗುಲಾಬಿ ಬಳಿ ಬಂದು 'ಸಾಹೇಬ್ರು ಒಳಗೆ ಕರೀತಾವ್ರೆ' ಎಂದ. ಗ್ಯಾನಿ 'ಯಾಕೆ?' ಅಂದು ಎದ್ದು ನಿಂತ. ಆದರೆ ಅವನು ತನ್ನ ಭಾರದ ಕೈಗಳಿಂದ ಭುಜ ಅದುಮಿ ಗ್ಯಾನಿಯನ್ನು ಕೂರಿಸಿದ. ಗುಲಾಬಿ